ಔರಾದ್ : ಯುವ ಕಾಂಗ್ರೆಸ್ ತಾಲೂಕು ಅಧ್ಯಕ್ಷರಾದ ಅನಿಲ್ ಹೆಡೆರವರ ಹುಟ್ಟುಹಬ್ಬದ ಪ್ರಯುಕ್ತ ಪಟ್ಟಣದ ಸಾರ್ವಜನಿಕ ಸರ್ಕಾರಿ ಆಸ್ಪತ್ರೆ ಮತ್ತು ಗುಡಿಸಲು ವಾಸಿಗಳಿಗೆ ಹಣ್ಣು ಮತ್ತು ಬ್ರೆಡ್ ವಿತರಣೆ ಮಾಡಿ ಸರಳವಾಗಿ ಹುಟ್ಟುಹಬ್ಬ ಆಚರಣೆ ಮಾಡಲಾಯಿತು.ಬಳಿಕ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಹುಟ್ಟುಹಬ್ಬಗಳು ಕೇವಲ ಆಡಂಬರ ಆಚರಣೆಗಳಿಗೆ ಸೀಮಿತವಾಗಿವೆ. ನನ್ನ ಹುಟ್ಟುಹಬ್ಬದಂದು ಆಸ್ಪತ್ರೆಗಳಲ್ಲಿರುವ ರೋಗಿಗಳು ಮತ್ತು ಗುಡಿಸಲು ವಾಸಿಗಳ ಜೊತೆಯಲ್ಲಿ ಸರಳವಾಗಿ ಆಚಾರಿಸಿಕೊಂಡಿದ್ದು ಸಂತಸ ತಂದಿದೆ ಎಂದರು. ಮಾಜಿ ಯುವ ಕಾಂಗ್ರೆಸ್ ಅಧ್ಯಕ್ಷ ದತ್ತಾತ್ರಿ ಬಾಪುರೆ ಮಾತನಾಡಿ ಅನಿಲ್ ಹೆಡೆರವರು ವಿಶೇಷವಾಗಿ ಯುವಕರ ಮೇಲೆ ಅಪಾರ ಪ್ರೀತಿ, ವಿಶ್ವಾಸ ಹೆಚ್ಚು. ಆದ್ದರಿಂದ ಸಾಕಷ್ಟು ಅಭಿಮಾನಿಗಳನ್ನು ಸಂಪಾದಿಸಿದ್ದಾರೆ. ಪ್ರತಿಯೊಬ್ಬರ ಕಷ್ಟ ಸುಖದಲ್ಲಿ ಮುಂಚೂಣೀಯಲ್ಲಿ ಇರುತ್ತಾರೆ. ರಾಜಕೀಯ ಜೀವನದಲ್ಲಿ ಇನ್ನಷ್ಟು ಮುಂದೆ ಸಾಗಬೇಕು ಎಂಬುದು ನಮ್ಮೆಲ್ಲರ ಆಸೆಯಾಗಿದೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಭಾರತ ರಾಷ್ಟ್ರೀಯ ವಿದ್ಯಾರ್ಥಿ ಒಕ್ಕೂಟ ಜಿಲ್ಲಾ ಉಪಾಧ್ಯಕ್ಷ ರತ್ನದೀಪಕಸ್ತೂರೆ, ತಾಲೂಕು ಅಧ್ಯಕ್ಷರಾದ ಚಂದುಡಿಕೆ, ಮುಖಂಡರಾದ ಸತೀಶ್ ಪುಲಾರಿ, ಅಮಿತ್ ಶಿವಪೂಜೆ, ಹರಿದೇವ ಸಂಗನಾಳ, ಆನಂದ ಕಾಂಬಳೆ, ರೋಹಿತ್ ಕಾಂಬಳೆ ಉಪಸ್ಥಿತರಿದ್ದರು.

ಆರ್ಥಿಕ ಅಭಿವೃದ್ಧಿಗೆ ಅಲ್ಲಮಪ್ರಭು ಹಲವು ವಿನೂತನ ಯೋಜನೆಗಳ ಗುರುಬಸವ ಪಟ್ಟದ್ದೇವರು

● ಪ್ರಜಾವಾಹಿನಿ–ಔರಾದ

ಪಟ್ಟಣದ ಅಮರೇಶ್ವರ ಕಾಲೇಜು ಹತ್ತಿರದ ಅನುಭವ ಮಂಟಪದಲ್ಲಿ ವಚನ ಚಾರಿಟಬಲ್ ಟ್ರಸ್ಟ್ ಹಾಗೂ ಬಸವ ಬಾಂಧವ್ಯ ಬಳಗ ಔರಾದ್ ವತಿಯಿಂದ ಗುರುವಾರ ನಗೆ ಹಬ್ಬ ಕಾರ್ಯಕ್ರಮ ಆಯೋಜಿಸಿತ್ತು.

ಕಾರ್ಯಕ್ರಮದಲ್ಲಿ ಹಾಸ್ಯ ಕಲಾವಿದರಾದ ಇಂದುಮತಿ ಸಾಲಿಮಠ ಹಾಗೂ ವೈಜಿನಾಥ ಸಜ್ಜನಶೆಟ್ಟಿ ಅವರು ರಾಜಕೀಯ, ಸಾಮಾಜಿಕ ವಿಷಯಗಳನ್ನು ತಮ್ಮದೇ ಅನುಭವಗಳ ಮೂಲಕ ಹಂಚಿಕೊಂಡು, ಹಾಸ್ಯದ ಹೊಳೆ ಹರಿಸಿದರು.

ಇದೇ ಸಂದರ್ಭದಲ್ಲಿ ದುಬೈ ಇಂಡಿಯಾ ಇಂಟರ್ ನ್ಯಾಷನಲ್ ಅವಾರ್ಡ್ ಪಡೆದ ವಚನ ಸಮೂಹ ಸಂಸ್ಥೆಯ ಸಂಸ್ಥಾಪಕ ಅಲ್ಲಮಪ್ರಭು ನಾವದಗೆರೆ ಅವರಿಗೆ ಔರಾದ್ ಬಳಗದ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು.

ಬಳಿಕ ಮಾತನಾಡಿದ ಹಿರೇಮಠ ಸಂಸ್ಥಾನದ ಪೂಜ್ಯ ಶ್ರೀ ಗುರುಬಸವ ಪಟ್ಟದೇವರು, ಕಲ್ಯಾಣ ನಾಡಿನ ಎಲ್ಲ ಜಿಲ್ಲೆಗಳಲ್ಲಿ ಜನಸಾಮಾನ್ಯರ ಆರ್ಥಿಕ ಅಭಿವೃದ್ಧಿಗೆ ಅಲ್ಲಮಪ್ರಭು ಅವರು ಹಲವು ವಿನೂತನ ಯೋಜನೆಗಳ ಮೂಲಕ ಮಹತ್ವದ ಕಾಣಿಕೆ ನೀಡುತ್ತಿದ್ದಾರೆ. ನಾವದಗೆರೆ ಕುಟುಂಬ ಮಾದರಿ ಕುಟುಂಬವಾಗಿದೆ ಎಂದರು.

ಈ ಸಂದರ್ಭದಲ್ಲಿ ಅಲ್ಲಮಪ್ರಭು ನಾವದಗೆರೆ, ಶಿವಕುಮಾರ ಸಾಲಿ, ಪಪಂ ಅಧ್ಯಕ್ಷೆ ಸರುಬಾಯಿ ಘುಳೆ, ಲಿಂಗಾರತಿ ನಾವದಗೆರೆ, ಸುರೇಶ ಪಾಟೀಲ್, ಪ್ರಕಾಶ ಘುಳೆ, ಅಶೋಕರೆಡ್ಡಿ ಹೆಗ್ಗಾಡೆ, ಮಲ್ಲಿಕಾರ್ಜುನ ಟಂಕಸಾಲೆ, ಶಿವರಾಜ ಶಟಕಾರ್, ಭೀಮಾಶಂಕರ ಜೀರ್ಗೆ, ಪ್ರಕಾಶ ಗಂದಿಗುಡೆ, ಜಗನ್ನಾಥ ಮೂಲಗೆ, ಭೀಮಸಿಂಗ್ ಠಾಕೂರ್, ಮಹಾದೇವ ಘುಳೆ, ಅಂಬಾದಾಸ ನಳಗೆ, ಅಮರ ಸ್ವಾಮಿ, ಆನಂದ ಮಜಗೆ, ರಮೇಶ ಪಾಂಚಾಳ ಸೇರಿದಂತೆ ಇನ್ನಿತರರಿದ್ದರು.

ಅಕಾಲಿಕ ಗಾಳಿ–ಮಳೆಗೆ ಬೆಳೆ ಹಾನಿ: ಪರಿಹಾರಕ್ಕೆ ಒತ್ತಾಯ

● ಪ್ರಜಾವಾಹಿನಿ–ಶಹಾಪುರ

ಜಿಲ್ಲೆಯಾದ್ಯಂತ ಗುರುವಾರ ಸಂಜೆ ಭಾರೀ ಗಾಳಿ–ಮಳೆಗೆ ರೈತರು ಕಷ್ಟಪಟ್ಟು ಬೆಳೆದ ಭತ್ತ, ಸಜ್ಜೆ ಬೆಳೆಗಳು ಸಂಪೂರ್ಣ ಹಾನಿಯಾಗಿದ್ದು, ಸೂಕ್ತ ಪರಿಹಾರ ನೀಡಬೇಕು ಎಂದು ರಾಜ್ಯ ರೈತ ಸಂಘ–ಹಸಿರು ಸೇನೆ ವಾಸುದೇವ ಮೇಟಿ ಬಣದ ಜಿಲ್ಲಾ ಉಪಾಧ್ಯಕ್ಷ ರಾಜಾ ಮಾದಪ್ಪ ನಾಯಕ್ ವನದುರ್ಗ ಆಗ್ರಹಿಸಿದ್ದಾರೆ.

ತಾಲೂಕಿನ ವನದುರ್ಗ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ಭತ್ತ ಸಜ್ಜೆ, ಬೆಳೆಗಳು ನೆಲ ಕಚ್ಚಿದ್ದು ಬಾರಿ ಪ್ರಮಾಣದಲ್ಲಿ ಹಾನಿ ಉಂಟಾಗಿದೆ. ರೈತರು ಸಾಲಸೂಲ ಮಾಡಿ ದುಬಾರಿ ಹಣ ಖರ್ಚು ಮಾಡಿ ಭತ್ತ ಹಾಗೂ ಸಜ್ಜೆ ಇನ್ನಿತರ ಬೆಳೆಗಳನ್ನು ಬೆಳೆದಿದ್ದು, ಇನ್ನೇನೂ ಬೆಳೆ ಕೈಗೆಬರುತ್ತವೆ ಎನ್ನುವ ಆಸೆಯನ್ನು ಹೊತ್ತಿದ್ದ ಅನ್ನದಾತರಿಗೆ ಭಾರೀ ಹೊಡೆತ ಬಿದ್ದಿದೆ. ಅಕಾಲಿಕ ಮಳೆ ಗಾಳಿ ಅವಾಂತರಕ್ಕೆ ಕೈಗೆ ಬಂದ ತುತ್ತು ಬಾಯಿಗೆ ಬರದಂತಾಗಿದೆ ಎಂದಿದ್ದಾರೆ.

ಇದರಿಂದಾಗಿ ರೈತರು ಆತಂಕದಲ್ಲಿದ್ದು ಅಧಿಕಾರಿಗಳು ಬೆಳೆ ಹಾನಿ ಪ್ರದೇಶಗಳಿಗೆ ಭೇಟಿ ನೀಡಿ ಪರಿಶೀಲನೆ ಮಾಡಿ, ರೈತರಿಗೆ ಸಮರ್ಪಕ ಬೆಳೆ ಹಾನಿ ಪರಿಹಾರ ನೀಡುವಂತೆ ಒತ್ತಾಯಿಸಿದ್ದಾರೆ.

ಏ.14ರಂದು ರಕ್ತದಾನ ಶಿಬಿರ

● ಪ್ರಜಾವಾಹಿನಿ–ಬೀದರ

ಎಂಡಿ. ಅಲೀಮುದ್ದೀನ್ ಫೌಂಡೇಶನ್ ಮತ್ತು ಮೂವ್‌ಮೆಂಟ್ ಆಫ್ ಜಸ್ಟೀಸ್, ಬೀದರ್ ಇವರ ಸಹಯೋಗದಲ್ಲಿ ಏಪ್ರಿಲ್ 14 ರಂದು, ಡಾ. ಬಾಬಾಸಾಹೇಬ್ ಅಂಬೇಡ್ಕರ್ ಜಯಂತಿಯ ಅಂಗವಾಗಿ, ಬೀದರ್‌ನ ಜಿಲ್ಲಾ ಪಂಚಾಯತ್ ಕಚೇರಿಯ ಬಳಿ ಇರುವ 100 ಹಾಸಿಗೆಗಳ ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಮೆಗಾ ರಕ್ತದಾನ ಶಿಬಿರವನ್ನು ಆಯೋಜಿಸಲಾಗಿದೆ.

ಈ ಶಿಬಿರವನ್ನು ಬೆಳಿಗ್ಗೆ 10 ರಿಂದ ಬೆಳಿಗ್ಗೆ 5 ರವರೆಗೆ ನಡೆಸಲಾಗುತ್ತದೆ. 18 ರಿಂದ 60 ವರ್ಷ ವಯಸ್ಸಿನ ಜನರು ರಕ್ತದಾನ ಮಾಡಬಹುದು. ದಾನಿಯಿಂದ ಸಂಗ್ರಹಿಸಿದ ಒಂದು ಯೂನಿಟ್ ರಕ್ತವು ಮೂರು ಜನರ ಜೀವವನ್ನು ಉಳಿಸಬಹುದು. ನೀವು, ವಿಶೇಷವಾಗಿ ಯುವಕರು, ಈ ಶಿಬಿರಕ್ಕೆ ಭೇಟಿ ನೀಡಿ, ರಕ್ತದಾನ ಮಾಡಿ, ಯಾರೊಬ್ಬರ ಜೀವನದಲ್ಲಿ ಒಬ್ಬರ ಜೀವನದಲ್ಲಿ ನಾಯಕರಾಗಬೇಕೆಂದು ಮಹಮ್ಮದ್ ಅಲೀಮುದ್ದೀನ್ ಫೌಂಡೇಶನ್ ವತಿಯಿಂದ ಮ್ಯಾನೇಜಿಂಗ್ ಟ್ರಸ್ಟಿಗಳಾದ ಮಹಮ್ಮದ್ ಅಸಾದುದ್ದೀನ್ ಹಾಗೂ ಸೈಯದ್ ಸರ್ಫರಾಜ್ ಹಶ್ಮಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬೀದರ : ಭಾಲ್ಕಿ ತಾಲ್ಲೂಕಿನ ಕಪಲಾಪೂರ ಶ್ರೀ ಕ್ಷೇತ್ರ ಜೈ ಭವಾನಿ ದೇವಾಲಯ 50ನೇಯ ವಾರ್ಷಿಕ ಜಾತ್ರಾ ಮಹೋತ್ಸವ ಏ.12 ರ ಶನಿವಾರ ಭವಾನಿ ಮಾತಾ ಕಾ ಜಾಗರಣ್ ಏ.13 ರಂದು ಜಂಗಿ ಕುಸ್ತಿ ಎರಡು ದಿನ ಜಾತ್ರೆ ನಡೆಯಲಿದೆ ಎಂದು ಗ್ರಾಮದ ಮುಖ್ಯಸ್ಥರು ಮಾಹಿತಿ ನೀಡಿದ್ದಾರೆ.

ಕಾಲೇಜು ಅಭಿವೃದ್ಧಿಗೆ ಯೋಜನೆ ಸಿದ್ಧಪಡಿಸಿ–ಅನುಷ್ಠಾನಗೊಳಿಸಿ: ಪ್ರಭು ಚವ್ಹಾಣ

● ಪ್ರಜಾವಾಹಿನಿ–ಔರಾದ್

ಕ್ಷೇತ್ರದ ಶಾಸಕ ಪ್ರಭು ಬಿ.ಚವ್ಹಾಣ ಅವರು ಶುಕ್ರವಾರ ಔರಾದ್ ಸರ್ಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯಕ್ಕೆ ಭೇಟಿ ನೀಡಿ ಅಲ್ಲಿನ ವ್ಯವಸ್ಥೆಯನ್ನು ಪರಿಶೀಲಿಸಿದರು. ಇದೇ ವೇಳೆ ಕಾಲೇಜು ಅಭಿವೃದ್ಧಿ ಸಮಿತಿ ಸಭೆ ನಡೆಸಿ ಅಭಿವೃದ್ಧಿ ಮತ್ತು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಮಾಡಬೇಕಾದ ಕೆಲಸ–ಕಾರ್ಯಗಳ ಬಗ್ಗೆ ಸುದೀರ್ಘವಾಗಿ ಚರ್ಚಿಸಿದರು.

ಹಿಂದಿನ ಪ್ರಾಂಶುಪಾಲರ ನಿಷ್ಕಾಳಜಿಯಿಂದಾಗಿ ವಿದ್ಯಾರ್ಥಿಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಕೇಳಿ ಶಾಸಕರು ತೀವ್ರ ಆಕ್ರೋಶ ಹೊರಹಾಕಿದರು. ವಿದ್ಯಾರ್ಥಿಗಳಿಂದ ಪರೀಕ್ಷಾ ಶುಲ್ಕ ಪಡೆದು ವಿಶ್ವವಿದ್ಯಾಲಯಕ್ಕೆ ಭರಿಸದ ಕಾರಣ ಸಕಾಲಕ್ಕೆ ಅಂಕಪಟ್ಟಿಗಳು ಸಿಗದೇ ವಿದ್ಯಾರ್ಥಿಗಳು ಮುಂದಿನ ವ್ಯಾಸಂಗ ಮಾಡಲಾಗದೆ, ಉದ್ಯೋಗ ಪಡೆಯಲು ಸಾಧ್ಯವಾಗದೇ ಅತಂತ್ರರಾಗಿದ್ದರು. ವಿಷಯ ತಿಳಿಯುತ್ತಿದ್ದಂತೆ ಸಂಬಂಧಿತ ಸಚಿವರು, ಇಲಾಖೆ ಆಯುಕ್ತರನ್ನು ಭೇಟಿ ಮಾಡಿ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲಾಗಿದೆ ಎಂದು ಶಾಸಕರು ಪ್ರಸ್ತಾಪಿಸಿದರು.

ಅವಶ್ಯಕತೆಗಿಂತ ಹೆಚ್ಚಿನ ಸ್ಟೇಷನರಿ ಹಾಗೂ ಮತ್ತಿತರೆ ಸಾಮಗ್ರಿ ಖರೀದಿಸಿರುವುದು, ಪ್ರಾಜೆಕ್ಟರ್, ಲ್ಯಾಪ್‌ಟಾಪ್‌ಗಳ ದುರ್ಬಳಕೆ, ಗ್ರಂಥಾಲಯದಿಂದ ಸಾವಿರಾರು ಪುಸ್ತಕಗಳ ನಾಪತ್ತೆ, ಖರ್ಚು ವೆಚ್ಚಗಳ ವಹಿ ನಿರ್ವಹಿಸದೆ ಇರುವುದು, ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಣೆಯಲ್ಲಿ ತಾರತಮ್ಯ, ಕಾಲೇಜು ಅಭಿವೃದ್ಧಿ ಸಮಿತಿಯ ಹಣವನ್ನು ಅಧ್ಯಕ್ಷರ ಅನುಮತಿ ಪಡೆಯದೆ ಖರ್ಚು ಮಾಡಿರುವುದು, ವಿದ್ಯಾರ್ಥಿವೇತನ ಹಣ ದುರ್ಬಳಕೆಯಂತಹ ಸುಮಾರು 21 ಗುರುತರ ಆರೋಪಗಳು ಹಿಂದಿನ ಪ್ರಾಂಶುಪಾಲರ ಮೇಲಿವೆ. ಕಾಲೇಜು ಅಭಿವೃದ್ಧಿಯನ್ನು ಮರೆತು ಲಕ್ಷಾಂತರ ಹಣ ಲೂಟಿ ಮಾಡಿದ್ದಾರೆಂದು ಜನ ಆರೋಪಿಸುತ್ತಿದ್ದಾರೆ. ಕಾಲೇಜು ಅಭಿವೃದ್ಧಿಯ ಬದಲು ಅಧೋಗತಿಗೆ ತಲುಪಿದೆ ಎಂದು ವಿದ್ಯಾರ್ಥಿಗಳು ಅಳಲನ್ನು ತೋಡಿಕೊಳ್ಳುತ್ತಿದ್ದಾರೆ.

ಹೊಸದಾಗಿ ಬಂದಿರುವ ಪ್ರಾಂಶುಪಾಲರು ಸರಿಯಾಗಿ ಕೆಲಸ ಮಾಡಬೇಕು. ಕಾಲೇಜು ಅಭಿವೃದ್ಧಿಗೆ ಒಂದು ಯೋಜನೆಯನ್ನು ಹಾಕಿಕೊಂಡು ಹಂತ ಹಂತವಾಗಿ ಅನುಷ್ಠಾನಗೊಳಿಸಲು ಮುಂದಾಗಬೇಕು. ಅಭಿವೃದ್ಧಿಗೆ ನನ್ನ ಸಹಕಾರ ಸದಾ ಇರುತ್ತದೆ. ಆದರೆ ಅವ್ಯವಹಾರಗಳು ನಡೆದರೆ ಯಾರೇ ಇರಲಿ ಸುಮ್ಮನಿರುವುದಿಲ್ಲ. ಹಾಗಾಗಿ ಎಲ್ಲರೂ ಜವಾಬ್ದಾರಿಯುತವಾಗಿ ಕೆಲಸ ಮಾಡಬೇಕೆಂದು ಶಾಸಕ ಪ್ರಭು ಚವ್ಹಾಣ ಎಚ್ಚರಿಕೆ ನೀಡಿದರು.

ಸಮಸ್ಯೆಗಳಿಗೆ ಸ್ಥಳದಲ್ಲೇ ಪರಿಹಾರ: ಕಾಲೇಜು ಆವರಣದಲ್ಲಿ ಹೊಸ ಕಟ್ಟಡಗಳ ನಿರ್ಮಾಣವಾಗುತ್ತಿದೆ. ಒಂದೇ ಕೊಳವೆ ಬಾವಿಯಿದ್ದು, ಕಟ್ಟಡಗಳ ನಿರ್ಮಾಣ ಮತ್ತು ಕುಡಿಯುವ ನೀರಿಗೆ ಸಮಸ್ಯೆಯಾಗುತ್ತಿದೆ ಎಂದು ಪ್ರಾಂಶುಪಾಲರು ಶಾಸಕರ ಗಮನಕ್ಕೆ ತಂದಾಗ ಕೂಡಲೇ ಹೊಸ ಬೋರವೆಲ್ ಕಲ್ಪಿಸಿಕೊಡುವಂತೆ ಪಟ್ಟಣ ಪಂಚಾಯತಿ ಮುಖ್ಯಾಧಿಕಾರಿಗಳಿಗೆ ನಿರ್ದೇಶನ ನೀಡಿದರು.

ವಿವಿಧ ವಿಭಾಗಗಳಲ್ಲಿ 800 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಕಾಲೇಜು ದೂರ ಇದ್ದು, ಮಕ್ಕಳು ನಡೆದುಕೊಂಡೆ ಬರುತ್ತಿದ್ದಾರೆ ಎಂದು ಪ್ರಾಂಶುಪಾಲರು ಸಭೆಯಲ್ಲಿ ಶಾಸಕರ ಗಮನಕ್ಕೆ ತಂದರು. ಸ್ಥಳಕ್ಕೆ ಕೆ.ಎಸ್.ಆರ್.ಟಿ.ಸಿ ಡಿಪೋ ಮ್ಯಾನೇಜರ್‌ರನ್ನು ಕರೆಸಿ ಎರಡು ದಿನದೊಳಗಾಗಿ ಸಿಟಿ ಬಸ್ ಓಡಿಸಲು ವ್ಯವಸ್ಥೆ ಮಾಡಿಕೊಡುವಂತೆ ತಾಕೀತು ಮಾಡಿದರು. ಈ ವೇಳೆ ಪ್ರಾಂಶುಪಾಲ ಅಂಬಿಕಾ ಕೊತಮೀರ್ ಸೇರಿದಂತೆ ಎಲ್ಲ ಉಪನ್ಯಾಸಕರು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಉಪಸ್ಥಿತರಿದ್ದರು.

ಹೊಸ ಕಟ್ಟಡಕ್ಕೆ ಭೂಮಿ ಪೂಜೆ: ಸರ್ಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯದ ಆವರಣದಲ್ಲಿ 3.88 ಕೋಟಿ ವೆಚ್ಚದಲ್ಲಿ ಕೈಗೊಂಡಿರುವ ಹೆಚ್ಚುವರಿ ಬ್ಲಾಕ್ ನಿರ್ಮಾಣ ಕಾಮಗಾರಿಗೆ ಶಾಸಕರು ಭೂಮಿ ಪೂಜೆ ನೆರವೇರಿಸಿದರು.

ಅಂಕಪಟ್ಟಿ ವಿತರಣೆ: ಹಲವು ದಿನಗಳಿಂದ ಅಂಕಪಟ್ಟಿ ಸಿಗದೇ ಪರದಾಡಿದ್ದ ವಿದ್ಯಾರ್ಥಿಗಳಿಗೆ ಅಂಕಪಟ್ಟಿಗಳನ್ನು ತರಿಸುವಲ್ಲಿ ಯಶಸ್ವಿಯಾದ ಶಾಸಕರು ಇಂದು ವಿದ್ಯಾರ್ಥಿಗಳಿಗೆ ವಿತರಿಸಿದರು.

ಈ ಸಂದರ್ಭದಲ್ಲಿ ಮುಖಂಡರಾದ ಧೋಂಡಿಬಾ ನರೋಟೆ, ರಾಮಶೆಟ್ಟಿ ಪನ್ನಾಳೆ, ಕೇರಬಾ ಪವಾರ, ಬಾಲಾಜಿ ಠಾಕೂರ್, ಸುಜಿತ ರಾಠೋಡ, ಬಸವರಾಜ ಹಳ್ಳೆ ಸೇರಿದಂತೆ ಇತರರು ಉಪಸ್ಥಿತರಿದ್ದರು.

ICICI Home Finance ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್, ಐಸಿಐಸಿಐ ಹೆಚ್‌ಎಫ್‌ಸಿ ಟವರ್, ಅಂಧೇರಿ – ಕುರ್ಲಾ ರಸ್ತೆ, ಅಂಧೇರಿ (ಪೂರ್ವ), ಮುಂಬೈ – 400059, ಭಾರತ

ಶಾಖಾ ಕಚೇರಿ: ಮಳಿಗೆ ಸಂಖ್ಯೆ 1316/ಸಿ, 2ನೇ ಮಹಡಿ, 9ನೇ ಕ್ರಾಸ್, 9ನೇ ಮುಖ್ಯರಸ್ತೆ, ತಿರುಮಲಗಿರಿ ವೆಂಕಟೇಶ್ವರ ದೇವಸ್ಥಾನದ ಎದುರು, ಜೆ.ಪಿ.ನಗರ 2ನೇ ಹಂತ, ಸೆಂಟ್ರಲ್ ಬ್ಯಾಂಕ್ ಮೇಲೆ, ಬೆಂಗಳೂರು– 560078

ಶಾಖಾ ಕಚೇರಿ: 1ನೇ ಮಹಡಿ, ನಂ.165 & 166, ಮಂಜುನಾಥ ಚೇಂಬರ್ಸ್, ಶಂಕರ್ ನಗರ, ಮುಖ್ಯರಸ್ತೆ, ಮಹಾಲಕ್ಷ್ಮಿಪುರಂ, ಬೆಂಗಳೂರು – 560096

[ನಿಯಮ 8(6)ರ ನಿಬಂಧನೆಯನ್ನು ನೋಡಿ]

ಸ್ಥಿರ ಆಸ್ತಿಗಳ ಮಾರಾಟಕ್ಕೆ ಸೂಚನೆ

2002 ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳ ನಿಯಮ 8(6) ರ ನಿಬಂಧನೆಯೊಂದಿಗೆ ಓದಲಾದ 2002ರ ಹಣಕಾಸು ಆಸ್ತಿಗಳ ಭದ್ರತೆ ಮತ್ತು ಪುನರ್ನಿರ್ಮಾಣ ಮತ್ತು ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆಯ ಅಡಿಯಲ್ಲಿ ಸ್ಥಿರ ಆಸ್ತಿಗಳ ಮಾರಾಟಕ್ಕಾಗಿ ಇ–ಹರಾಜು ಮಾರಾಟ ಸೂಚನೆ.

ಸಾರ್ವಜನಿಕರಿಗೆ ಮತ್ತು ವಿಶೇಷವಾಗಿ ಸಾಲಗಾರರು ಮತ್ತು ಖಾತರಿದಾರರಿಗೆ ಸೂಚನೆ ನೀಡುತ್ತಾ, ಕೆಳಗೆ ವಿವರಿಸಿರುವ ಸ್ಥಿರ ಆಸ್ತಿಯನ್ನು ಭದ್ರತಾ ಕ್ರೆಡಿಟ್‌ದಾರರಿಗೆ ಅಡಮಾನ ಇಡಲಾಗಿದೆ/ವಿಧಿಸಲಾಗಿದ್ದು, ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್‌ನ ಅಧಿಕೃತ ಅಧಿಕಾರಿಯು ಇದರ ಸ್ವಾಧೀನವನ್ನು ತೆಗೆದುಕೊಂಡಿದ್ದಾರೆ. ಕೆಳಗೆ ನೀಡಲಾದ ಸಂಕ್ಷಿಪ್ತ ವಿವರಗಳ ಪ್ರಕಾರ ಅದನ್ನು "ಎಲ್ಲಿ ಇದೆಯೋ ಹಾಗೆಯೇ", "ಇರುವಂತೆ" ಮತ್ತು "ಇರುವುದೇನೋ ಹಾಗೆಯೇ" ಮಾರಾಟ ಮಾಡಲಾಗುತ್ತದೆ;

ಕ್ರ. ಸಂ.	ಸಾಲಗಾರರು/ಸಹ ಸಾಲಗಾರರು/ ಖಾತರಿದಾರರು/ ಕಾನೂನುಬದ್ಧ ಉತ್ತರಾಧಿಕಾರಿಗಳ ಹೆಸರು. ಸಾಲದ ಖಾತೆ ಸಂಖ್ಯೆ	ತಿಳಿದಿರುವ ಯಾವುದೇ ಋಣಭಾರಗಳನ್ನು ಹೊಂದಿರುವ ಸುರಕ್ಷಿತ ಆಸ್ತಿ(ಗಳ) ವಿವರಗಳು	ಬಾಕಿ ಇರುವ ಮೊತ್ತ	ಮೀಸಲು ಬೆಲೆ ಅರ್ನೆಸ್ಟ್ ಮನಿ ಠೇವಣಿ	ಆಸ್ತಿ ತಪಾಸಣೆ ದಿನಾಂಕ ಮತ್ತು ಸಮಯ	ಹರಾಜಿನ ದಿನಾಂಕ ಮತ್ತು ಸಮಯ	ಹರಾಜಿನ ದಿನಾಂಕಕ್ಕೆ ಒಂದು ದಿನ ಮೊದಲು	ಸರ್ಫೇಸಿ ಹಂತ
(ಎ)	(ಬಿ)	(ಸಿ)	(ಡಿ)	(ಇ)	(ಎಫ್)	(ಜಿ)	(ಎಚ್)	(ಐ)
1.	ಸೈಯದ್ ಹಸನ್ ಕ್ವಾದ್ರಿ (ಸಾಲಗಾರ) ಅಮ್ತುಲ್ ಹಕೀಮ್ (ಸಹ–ಸಾಲಗಾರ) ಸಾಲ ಖಾತೆ ಸಂಖ್ಯೆ. NHBNG00001254215	ಖಾಲಿ ನಿವೇಶನ ಹೊಂದಿರುವ ನಿವೇಶನ ಸಂಖ್ಯೆ 09 ಪಿಡ್ ಸಂಖ್ಯೆ 150200200900120508, ಖಾತಾ ಸಂಖ್ಯೆ 1151/09ರಲ್ಲಿ ಸೈಟ್ ಸಂಖ್ಯೆ 09 ಆಸ್ತಿ ಕೆತ್ತಲಾಗಿದೆ ಲೇಔಟ್‌ನಲ್ಲಿ ಸೈಟ್ ಸಂಖ್ಯೆ 105/2 ರಿಂದ ಕೆತ್ತಲಾಗಿದೆ Lacete & Kwf ಟ್ರಸ್ಟ್(R) ದೊಡ್ಡಜಾಲ ಅಮಾನಿಕೆರೆ ಗ್ರಾಮ, ಬೆಂಗಳೂರು.	ರೂ.17,88, 716/– ಏಪ್ರಿಲ್ 07, 2025	ರೂ.41,55, 300/– ರೂ.4,15, 530/–	ಮೇ 09, 2025ರ ಬೆಳಗ್ಗೆ 11:00 ರಿಂದ ಮಧ್ಯಾಹ್ನ 03:00	ಮೇ 16, 2025ರ ಮಧ್ಯಾಹ್ನ 02:00 ರಿಂದ 03:00	ಮೇ 15, 2025ರ ಸಂಜೆ 05:00 ಗಂಟೆಗೆ ಮೊದಲು	ಭೌತಿಕ ಸ್ವಾಧೀನ
2.	ಚೇತನ್ ಬಿ ಕೆ (ಸಾಲಗಾರ) ನಾಗಮಣಿ ಚಿಕೆ (ಸಹ–ಸಾಲಗಾರ) ಸಾಲ ಖಾತೆ ಸಂಖ್ಯೆ. LHBWQ00001346166 & LHBWQ00001346170	ಆಸ್ತಿ ಹೊಂದಿರುವ ನಿವೇಶನ ಸಂಖ್ಯೆ 14, ಬಿಬಿಎಂಪಿ ಖಾತಾ ಸಂಖ್ಯೆ 58/1/58/1ಎ1/14, ಹಳೇಯ ಸೈಟ್ ಸಂಖ್ಯೆ 58/ರಲ್ಲಿ ರಚಿಸಲಾಗಿದೆ, ಹೊಸದಾಗಿ ಪರಿವರ್ತಿತ ಸೈಟ್ ಸಂಖ್ಯೆ 58/1ಎ1 ಜರಕಾ–ಬಂಡೆ ಕವಲು ಗ್ರಾಮ (ಚೆಬಿ ಕಾವಲ್ ಗ್ರಾಮ), ಬೆಂಗಳೂರಿನ ಯಲಹಂಕ ಹೋಬಳಿಯಲ್ಲಿದೆ.	ರೂ.46,46, 737/– ಏಪ್ರಿಲ್ 07, 2025	ರೂ.65,28, 600/– ರೂ.6,52, 860/–	ಮೇ 09, 2025ರ ಬೆಳಗ್ಗೆ 11:00 ರಿಂದ ಮಧ್ಯಾಹ್ನ 03:00	ಮೇ 16, 2025ರ ಮಧ್ಯಾಹ್ನ 02:00 ರಿಂದ 03:00	ಮೇ 15, 2025